ಪ್ರಮಾಣ ವಚನ ಬೋಧಿಸಿದ ದಿನಾಂಕ:**20.07.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್.ಪಿ ವಕೀಲರಿಂದ**

ಈ ಕೇಸನ್ನು ಗಣೇಶ್ ಹಾಕಿದ್ದಾರೆ. ಅವರಿಗೆ ಜಮೀನು ಬೇಕೆಂದು ಪರಿಹಾರ ಕೇಳಿದ್ದಾರೆ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ಸುಳ್ಳು ಸಾಕ್ಷಿಯನ್ನು ಹೇಳಲು ಬಂದಿದ್ದೇನೆಂದರೆ ಸರಿಯಲ್ಲ. ವಾದಿ ಮತ್ತು **1** ನೇ ಪ್ರತಿವಾದಿಯು ನಮಗೆ ಸಂಬಂಧಿಕರಲ್ಲ. ನಾನು ಹುಸುಕೂರು ಗ್ರಾಮದಲ್ಲಿ ವಾಸಮಾಡುತ್ತಿದ್ದೇನೆ. ನಾನು ಹುಟ್ಟಿದಾಗಿನಿಂದ ಅದೇ ಊರಿನಲ್ಲಿ ವಾಸಮಾಡುತ್ತಿದ್ದೇನೆ. ನನಗೆ ವಾದಿ ಹೆಚ್ಚಾಗಿ ಪರಿಚಯವಿಲ್ಲ. ಆದರೆ **1** ನೇ ಪ್ರತಿವಾದಿಯು ನನಗೆ ತುಂಬಾ ವರ್ಷದಿಂದ ಪರಿಚಯವಿದ್ದಾರೆ. **1** ನೇ ಪ್ರತಿವಾದಿಗೆ ಒಬ್ಬನೇ ಮಗ ಅವನ ಹೆಸರು ರುದ್ರೇಶ್ ಆರಾಧ್ಯ. ವಾದಿಯ ಜಮೀನಿನ ಪಕ್ಕದಲ್ಲಿ ನನ್ನ ಜಮೀನು ಇದೆ ಎಂದರೆ ಸರಿ. ನನಗೆ ವಾದಿಯು ಹೆಚ್ಚಾಗಿ ಪರಿಚಯವಿಲ್ಲದೇ ಇದ್ದರೂ ಅವರು **1** ನೇ ಪ್ರತಿವಾದಿಯ ಮಗ ಎಂದು ನನಗೆ ಗೊತ್ತಿತ್ತು ಎಂದರೆ ಸರಿ. ವಾದಿಯು ಕೆಲಸ ನಿಮಿತ್ತ ಕೆಲವು ವರ್ಷದ ಹಿಂದೆ ಬೇರೆ ಊರಿಗೆ ಹೋಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯು ನಮ್ಮ ಊರಿನಲ್ಲಿ ಯಾವತ್ತಿಗೂ ವಾಸವಿರಲಿಲ್ಲ.

**1** ನೇ ಪ್ರತಿವಾದಿಯು **2** ನೇ ಪ್ರತಿವಾದಿಯ ಮನೆಯಲ್ಲಿ ಕೆಲಸಕ್ಕೆ ಇದ್ದರು ಎಂದರೆ ಸರಿಯಲ್ಲ. ಹಬ್ಬಹರಿದಿನಗಳಿಗೆ ವಾದಿಯು ಊರಿಗ ಬರುತ್ತಿದ್ದರು ಎಂದರೆ ಸರಿಯಲ್ಲ. **1** ನೇ ಪ್ರತಿವಾದಿಯು **2** ನೇ ಪ್ರತಿವಾದಿಯ ಮನೆಯಲ್ಲಿ ದನ ಮೇಯಿಸಿಕೊಂಡು ಸಗಣಿ ತೆಗೆದು ಊಟ ಮಾಡಿಕೊಂಡು ಇರುತ್ತಿದ್ದರು ಹಾಗೂ ಅವರಿಗೆ ಯಾವುದೇ ಸಂಬಳ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಚಿಕ್ಕಪ್ಪ – ಮಗಳು ಎಂಬ ಸಂಬಂದದಿಂದ **2** ನೇ ಪ್ರತಿವಾದಿಯ ತಾಯಿ **1** ನೇ ಪ್ರತಿವಾದಿಗೆ ಊಟ ಹಾಕುತ್ತಿದ್ದರು ಹಾಗೂ **1** ನೇ ಪ್ರತಿವಾದಿಯು

ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಗೆ ವೃದ್ಧಾಪ್ಯ ವೇತನ ಬರುತ್ತಿತ್ತು 2 ನೇ ಪ್ರತಿವಾದಿಯೇ ಕರೆದುಕೊಂಡು ಹೋಗಿ ಕೊಡಿಸುತ್ತಿದ್ದರು ಮತ್ತು 2 ನೇ ಪ್ರತಿವಾದಿಯೇ ಸದರಿ ಹಣವನ್ನು ಬಳಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಪ್ರಮಾಣಪತ್ರವನ್ನು ನಮ್ಮ ವಕೀಲರು ತಯಾರಿಸಿ ಹಾಕಿದ್ದಾರೆ ಎಂದರೆ ಸರಿ. ನಾನು ನಡೆದಿರುವ ವಿಚಾರವನ್ನು ನಮ್ಮ ವಕೀಲರಿಗೆ ಹೇಳಿದ್ದೇನೆ.

ಪ್ರಮಾಣಪತ್ರದಲ್ಲಿ ಪಂಚಾಯತಿ ಪಾರಿಕತ್ ಮೂಲಕ 1 ನೇ ಪ್ರತಿವಾದಿಗೆ ದಾವಾ ಆಸ್ತಿ ಬಂದಿದೆ ಎಂದು ಹೇಳಿದ್ದು, ಅದು ಸತ್ಯಾನಾ? ಎಂದರೆ ಹೌದು. ಸದರಿ ದಾಖಲೆಯನ್ನು ಖುದ್ದಾಗಿ ಪರಿಶಿಲಿಸಿದ್ದೀರಾ? ಎಂದರೆ ಹೌದು. ಯಾವ ಇಸವಿಯಲ್ಲಿ ಪಂಚಾಯತಿ ಪಾರಿಕತ್ ಆಗಿದೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಆಗಿರುವುದರಿಂದ ಅವರ ಮಕ್ಕಳ ಸಹಿ ಇಲ್ಲದೇ ಬೇರೆಯವರಿಗೆ ಮಾರಾಟ ಮಾಡುವ ಅಧಿಕಾರ ಇಲಿಲ್ಲ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯ ಕಷ್ಟಸುಖ ನೋಡಿದವರಿಗೆ 1 ನೇ ಪ್ರತಿವಾದಿಯು ಮಾರಾಟ ಮಾಡುವ ಹಕ್ಕು ಇದೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯ ಜಮೀನನ್ನು ನಾನು ಸ್ವಲ್ಪ ಸಮಯ ಗೇಣಿ ಮಾಡುತ್ತಿದ್ದೆನು ಎಂದರೆ ಸರಿ. 2 ನೇ ಪ್ರತಿವಾದಿಯೊಂದಿಗೆ ಶಾಮೀಲಾಗಿ ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ 1 ನೇ ಪ್ರತಿವಾದಿಯನ್ನು ನಾನೇ 2 ನೇ ಪ್ರತಿವಾದಿಯ ಮನೆಗೆ ಹೋಗಿ ಸೇರಿಸಿದ್ದೇನೆ ಎಂದರೆ ಸರಿಯಲ್ಲ.

ನನಗೆ ಇಬ್ಬರು ಮಕ್ಕಳಿದ್ದಾರೆ. ಅವರುಗಳೆಂದರೆ ರೋಹಿತ್ ಮತ್ತು ಹರೀಶ್. 1 ನೇ ಪ್ರತಿವಾದಿಯ ಆಸ್ತಿಯಲ್ಲಿ ಈಗಲೂ ಕೂಡ ವಾದಿಯ ಹೆಂಡತಿ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ. ಸ್ವಾಧೀನ ಬಿಡಿಸುವ ಕಾರಣಕ್ಕಾಗಿ ನನ್ನ ಮಗ ಹರೀಶ್ ಮತ್ತು 2 ನೇ ಪ್ರತಿವಾದಿಯು ಸೇರಿ ವಾದಿಯ ಕುಟುಂಬದವರಿಗೆ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದಿರುವ ಕಾರಣ ಅವರ ವಿರುದ್ಧ, ಕೇಸ್ ದಾಖಲಾಗಿದ್ದು, ಅದರಲ್ಲಿ ದೋಷರೋಪಣ ಪಟ್ಟಿ ಸಲ್ಲಿಸಿದ್ದಾರೆಂದರೆ ಸರಿಯಲ್ಲ. ಸದರಿ ಕೇಸಿನ ಸಂಖ್ಯೆಃ

ಸಿ.ಸಿ.**6123/2022** ಆಗಿದ್ದು, ಅದರಲ್ಲಿ ನನ್ನ ಮಗ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾನೆಂದರೆ ಸಾಕ್ಷಿಯು ನನ್ನ ಮಗ ಕೇಸಿಗೆ ಹಾಜರಾಗುತ್ತಿರುವುದು ಸರಿ. ಆದರೆ ಗಲಾಟೆಯ ಸಮಯದಲ್ಲಿ ನನ್ನ ಮಗ ಅಲ್ಲೆ ಇದ್ದನು ಅವನಿಗೂ ಗಲಾಟೆಗೂ ಸಂಬಂದವಿಲ್ಲ ಎಂದು ಹೇಳುತ್ತಾರೆ. ಅದೇ ದ್ವೇಷದಿಂದ ನಾನು **2** ನೇ ಪ್ರತಿವಾದಿಗೆ ಸಹಾಯ ಮಾಡುವ ಉದ್ದೇದಿಂದ ನಾನು ಅವರ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆಂದರೆ ಸರಿಯಲ್ಲ. ವಾದಿಯ ಹೆಂಡತಿ ಸುವರ್ಣಮ್ಮನವರು ಆಸ್ತಿ ಒತ್ತುವರಿ ಮತ್ತು ಫೋಡಿ ಹದ್ದುಬಸ್ತಿಗೆ ಹಾಕಿದ ಪ್ರಕರಣದಲ್ಲಿ ನಾನು ಹಾಜರಾಗುತ್ತಿದ್ದೇನೆಂದರೆ ಸರಿ. ವಾದಿಯ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ **2** ನೇ ಪ್ರತಿವಾದಿಯೊಂದಿಗೆ ಸೇರಿ ವಾದಿಯ ಕುಟಂಬಕ್ಕೆ ತೊಂದರೆ ಕೊಡುತ್ತಿದ್ದೆನೆಂದರೆ ಸರಿಯಲ್ಲ. **1** ನೇ ಪ್ರತಿವಾದಿಯನ್ನು **2** ನೇ ಪ್ರತಿವಾದಿಯೇ ನೋಡಿಕೊಳುತ್ತಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರಾ? ಎಂದರೆ ಇಲ್ಲ. ಆದರೆ ಕಣ್ಣಾರೆ ನೋಡಿದ್ದೇನೆ. ನನಗೆ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಕೂಡ ವಾದಿಯ ಕುಟುಂಬದ ಮೇಲೆ ಇರುವ ದ್ವೇಷದಿಂದ **2** ನೇ ಪ್ರತಿವಾದಿಗೆ ಸಹಾಯಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**2019** ರಲ್ಲಿ **1** ನೇ ಪ್ರತಿವಾದಿಯು **2** ನೇ ಪ್ರತಿವಾದಿಗೆ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟಿದ್ದರು. ಈ ವಿಚಾರವನ್ನು ನನಗೆ **1** ನೇ ಪ್ರತಿವಾದಿಯೇ ಹೇಳಿರುತ್ತಾರೆ. ಸದರಿ ಕರಾರುಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿಲ್ಲ. ಸದರಿ ಕರಾರಪತ್ರವನ್ನು ಮೋಸದಿಂದ ಮಾಡಿಕೊಂಡದ್ದಾರೆಂದರೆ ಸರಿಯಲ್ಲ. ಈ ರೀತಿ ಮೋಸ ಮಾಡಿರುವ ವಿಚಾರ ನನಗೂ ಗೊತ್ತಿತ್ತು ಎಂದರೆ ಸರಿಯಲ್ಲ. **2** ನೇ ಪ್ರತಿವಾದಿಯು ವಾದಿಗೆ ಯಾವುದೇ ಹಣವನ್ನು ಕೊಟ್ಟಿಲ್ಲ ಹಾಗೂ ಗುತ್ತಿಗೆ ಹಣವನ್ನು **1** ನೇ ಪ್ರತಿವಾದಿಗೆ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಯು ಮುಂದುವರೆದು ಅದೇ ಹಣದಿಂದ 1ನೇ ಪ್ರತಿವಾದಿಯು ಜೀವ ಉಳಿಸಿಕೊಂಡಿದ್ದಾರೆಂದು ಹೇಳುತ್ತಾರೆ.

**<u>ಮರು ವಿಚಾರಣೆ ಇರುವುದಿಲ್ಲ</u>**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.